# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿ.ಎಲ್.ಬಿ-3092/2015/ಡಿಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:01-09-2017.

## *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ*

ವಿಷಯ: ಶ್ರೀ ಸ್ಯೆಯದ್ ಹುಸೇನ್ ಫೀರಾ,ಕಂಪ್ಲಿ, ಹೊಸಪೇಟೆ ತಾಲ್ಲೂಕ್ ಬಳ್ಳಾರಿ ಜಿಲ್ಲೆ ನಿವಾಸಿ ಇವರು ಸಲ್ಲಿಸಿದ ದೂರಿನ ಕುರಿತು.

****

ಈ ದೂರನ್ನು ಶ್ರೀ ಸ್ಯೆಯದ್ ಹುಸೇನ್ ಫೀರಾ,ಕಂಪ್ಲಿ, ಹೊಸಪೇಟೆ ತಾಲ್ಲೂಕ್ ಬಳ್ಳಾರಿ ಜಿಲ್ಲೆ ನಿವಾಸಿ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು (1) ಮುಖ್ಯಾಧಿಕಾರಿಗಳು, ಪುರಸಭೆ ಕಾರ್ಯಾಲಯ, ಕಂಪ್ಲಿ, (2) ಶ್ರೀ ಚಿದಾನಂದ, ಬಿಲ್ ಕಲೆಕ್ಟರ್, ಪುರಸಭೆ ಕಂಪ್ಲಿ, ಬಳ್ಳಾರಿ ಮತ್ತು (3) ಶ್ರೀ ಎಫ್.ಬಿ ಶಂಕರಪ್ಪ, ನಿವೃತ್ತ ಮುಖ್ಯ ಅಧಿಕಾರಿಗಳು, ಪುರಸಭೆ ಕಂಪ್ಲಿ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. **ದೂರಿನ ಸಂಕ್ಷಿಪ್ತ ವಿವರ:**

ದೂರುದಾರರ ತಂದೆ ಶ್ರೀ ಸ್ಯೆಯದ್ ಫಕರುದ್ದೀನ್ ಸಾಬ್ ಇವರಿಗೆ ಜನತಾ ಮನೆ ಸಂ:445 /727 ಇದನ್ನು 1984-85 ರಲ್ಲಿ ಹಂಚಿಕೆ ಮಾಡಿಲಾಗಿತ್ತು. ಯಾವುದೇ ರೀತಿಯ ದಾಖಲೆಗಳಿಲ್ಲದೇ ಅದನ್ನು ದಾಸರ ಲಿಂಗಪ್ಪ ಎನ್ನುವವರ ಹೆಸರಿಗೆ ಖಾತೆ ಮಾಡಿ ಎದುರುದಾರರು ಕರ್ತವ್ಯಲೋಪ ಎಸಗಿದ್ದಾರೆ. ಆದ್ದರಿಂದ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಕೋರಿಕೊಂಡಿರುತ್ತಾರೆ.

3. 1ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ದೂರುದಾರರ ತಂದೆ ಸ್ಯೆಯದ್ ಫಕರುದ್ದೀನ್ ಸಾಬ್ ಮತ್ತು ಅವರ ಮಗ ರಾಜಾ ಸಾಬ್ ಇವರು ವಿವಾದಿತ ಆಸ್ತಿಯನ್ನು ನೋಂದಣಿ ಆಗದ ಒಂದು ಕರಾರು ಕ್ರಯ ಪತ್ರದ ಪ್ರಕಾರ ದಾಸರ ಲಿಂಗಪ್ಪ ಎನ್ನುವವರಿಗೆ ಕ್ರಯ ಮಾಡಿರುತ್ತಾರೆ. ಸದರಿ ದಾಸರ ಲಿಂಗಪ್ಪ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದ್ದರಿಂದ ಅನುಭೋಗದ ಹೆಸರು ಮಾತ್ರ ಬದಲಾವಣೆ ಮಾಡಲಾಗಿದೆ ಅಂತ ತಿಳಿಸಿದ್ದಾರೆ. 2ನೇ

Sd/-

ಎದುರುದಾರರು ನನಗೆ ಖಾತೆ ಬದಲಾವಣೆ ಮಾಡುವ ಅಧಿಕಾರವೇ ಇಲ್ಲ. ಸುಮ್ಮನೇ ನನ್ನನ್ನು ಪಕ್ಷಕಾರರನ್ನಾಗಿ ಮಾಡಿದ್ದಾರೆ. ಆದ್ದರಿಂದ ದೂರನ್ನು ವಜಾ ಮಾಡುವಂತೆ ಕೋರಿಕೊಂಡಿರುತ್ತಾರೆ.

4. ದೂರುದಾರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ನನಗೆ ರಾಜಾ ಸಾಬ್ ಎನ್ನುವ ಅಣ್ಣನೇ ಇಲ್ಲ.ನನಗೆ ತಮ್ಮನು ಸಹ ಇಲ್ಲ.ನನ್ನ ತಂದೆ ಅಥವಾ ಸಹೋದರ ಆಸ್ತಿ ಮಾರಾಟ ಮಾಡಿಲ್ಲ. ಆದ್ದರಿಂದ ಅನುಭೋಗದಾರನ ಹೆಸರು ರದ್ದುಪಡಿಸಕೊಡುವಂತೆ ಕೋರಿಕೊಂಡಿರುತ್ತಾರೆ.

5. ಕರಾರು ಪತ್ರದ ಮೇಲೆ ಹಕ್ಕು ಬದಲಾವಣೆ ಆಗಿರುವುದರಿಂದ ಮುಖ್ಯಾಧಿಕಾರಿಗಳು, ಕಂಪ್ಲಿ ಇವರಿಂದ ಪುನ: ಆಕ್ಷೇಪಣೆಗಳನ್ನು ತರಿಸಿಕೊಳ್ಳಲು ಆದೇಶ ಮಾಡಲಾಗಿತ್ತು. 1ನೇ ಎದುರುದಾರರಿಂದ ಆಕ್ಷೇಪಣೆ ಕೇಳಲಾಗಿದೆ. ಮುಖ್ಯಾಧಿಕಾರಿಗಳು ಒಂದು ವರದಿಯನ್ನು ಸಲ್ಲಿಸಿ, ದಿನಾಂಕ:21-6-2008 ರಂದು ಶ್ರೀ ದಾಸರಲಿಂಗಪ್ಪ ಎನ್ನುವವರು ನೋಂದಣಿ ಆಗದ ಮಾರಾಟ ಕ್ರಯ ಪತ್ರ ಹಾಜರುಪಡಿಸಿ ಸ್ವಯಂ ತೆರಿಗೆ ಘೋಷಣೆಗಳು, ಮಂಜೂರು ಪತ್ರ ಮತ್ತು ಇತರೆ ದಾಖಲೆಗಳನ್ನು ಸಲ್ಲಿಸಿದ್ದರಿಂದ ಹಿಂದಿನ ಮುಖ್ಯಾಧಿಕಾರಿಗಳು ಖಾತಾ ಬದಲಾವಣೆ ಮಾಡಿರುತ್ತಾರೆ. ಅಸಲು ದಾವೆ ಸಂಖ್ಯೆ:132/2012 ಹೊಸಪೇಟೆ ನ್ಯಾಯಾಲಯದಲ್ಲಿ ತೀರ್ಮಾನವಾದ ನಂತರ ನ್ಯಾಯಾಲಯದ ತೀರ್ಪಿನಂತೆ ಕ್ರಮ ಕೈಗೊಳ್ಳಲಾಗುವುದು ಅಂತ ತಿಳಿಸುತ್ತಾರೆ.

6. ಮುಖ್ಯಾಧಿಕಾರಿಗಳು, ಪುರಸಭೆ, ಕಂಪ್ಲಿ ಇವರು ಒಂದು ನೋಂದಣಿ ಆಗದ ಕ್ರಯ ಕರಾರು ಪತ್ರದ ಆಧಾರದ ಮೇಲೆ ಶ್ರೀ ದಾಸರಲಿಂಗಪ್ಪ ಎನ್ನುವವರಿಗೆ ಖಾತೆ ಬದಲಾವಣೆ ಮಾಡಿಕೊಟ್ಟಿದ್ದಾರೆ. ಸದರಿ ಕರಾರು ಪತ್ರವು ದಿನಾಂಕ:11-6-2001 ರದು ಇರುತ್ತದೆ. ಕ್ರಯ ಕರಾರು ಪತ್ರದಲ್ಲಿ ಆಸ್ತಿಯ ಸ್ವಾಧೀನವನ್ನು ಕೊಟ್ಟಿದರೆ ಅದು ಕಡ್ಡಾಯವಾಗಿ ನೋಂದಣಿ ಆಗಬೇಕಾದ ದಸ್ತಾವೇಜು ಆಗುತ್ತದೆ. 1ನೇ ಎದುರುದಾರರು ಶ್ರೀ ದಾಸರ ಲಿಂಗಪ್ಪನ ಹೆಸರನ್ನು ಸ್ವಾಧೀನದಾರರು ಅಂತ ಮಾತ್ರ ನಮೂದಿಸಿದ್ದೇನೆ ಅಂತ ಹೇಳುತ್ತಿದ್ದಾರೆ.

7. ಘಟನೆ ನಡೆದ ಅವಧಿಯಲ್ಲಿ ಶ್ರೀ ಎಫ್.ಟಿ. ಶಂಕರಪ್ಪ ಎನ್ನುವವರು ಮುಖ್ಯಾಧಿಕಾರಿಗಳಾಗಿದ್ದರೂ ಅಂತ ತಿಳಿಸಿದ್ದರಿಂದ ಅವರನ್ನು ಈ ಪ್ರಕರಣದಲ್ಲಿ 3ನೇ ಎದುರುದಾರರನ್ನಾಗಿ ಸೇರ್ಪಡೆ ಮಾಡಿಕೊಂಡು ಅವರಿಂದ ಆಕ್ಷೇಪಣೆಯನ್ನು ಕೇಳಲಾಗಿತ್ತು.

8. 3ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ ದಾಸರಲಿಂಗಪ್ಪ ಇವರ ಹೆಸರಿನಲ್ಲಿ ಖಾತೆ ಬದಲಾವಣೆಯ ಕಡತವನ್ನು ಕಂದಾಯ ವಿಭಾಗದ ಸಿಬ್ಬಂದಿಗಳು ನನಗೆ ನೆನಪಿರುವ ಪ್ರಕಾರ ಪುರಸಭೆಯ ಕೌನ್ಸಿಲರ್‌ಗಳೊಂದಿಗೆ ತೀವ್ರ ಚರ್ಚೆಯನ್ನು ನಡೆಸುತ್ತಿರುವಾಗ ಸಹಿ

2

Sd/-
4/9/17.

ತೆಗೆದುಕೊಂಡು ಹೋಗಿರುತ್ತಾರೆ. ಖಾತಾ ಬದಲಾವಣೆ ಅಂತಿಮ ಆದೇಶ ನನ್ನ ಗಮನಕ್ಕೆ ತಂದಿಲ್ಲ. ಖಾತಾ ವರ್ಗಾವಣೆಯ ಆದೇಶಕ್ಕೆ ನಾನು ಸಹಿ ಹಾಕಿಲ್ಲ. ಈಗಾಗಲೇ ದಿನಾಂಕ: 31-3-2015 ರಂದು ನಿವೃತ್ತಿ ಹೊಂದಿರುತ್ತೇನೆ ಎಂದು ತಿಳಿಸಿರುತ್ತಾರೆ.

9. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ದಿನಾಂಕ:11-6-2001 ರ ನೋಂದಣಿ ಆಗದೇ ಇರುವ ಮಾರಾಟದ ಕರಾರು ಕ್ರಯಪತ್ರದ ಪ್ರಕಾರ ದಿನಾಂಕ: 21-6-2008 ರಲ್ಲಿ ಖಾತೆ ಬದಲಾವಣೆಗೆ ದಾಸರಲಿಂಗಪ್ಪ ಎನ್ನುವವರು ಅರ್ಜಿಯನ್ನು ಸಲ್ಲಿಸಿದ್ದಾರೆ. ಇದಾದನಂತರ ದಿನಾಂಕ: 14-7-2008 ರಂದು ಹಕ್ಕು ಬದಲಾವಣೆ ಮಾಡಲಾಗಿದೆ. ದಿನಾಂಕ: 14-7-2008 ರಂದು ಮಾಡಿರುವ ಹಕ್ಕು ಬದಲಾವಣೆಯನ್ನು ದಿನಾಂಕ: 5-8-2015 ರಂದು ಈ ಸಂಸ್ಥೆಯಲ್ಲಿ ಪ್ರಶ್ನಿಸಲಾಗಿದೆ. ದೂರುದಾರರ ತಂದೆಗೆ ಸರ್ಕಾರವು ಜನಾತಾ ಮನೆಯನ್ನು ಮಂಜೂರು ಮಾಡುವಾಗ ಒಟ್ಟು ರೂ.4,000/- ಗಳನ್ನು ಸರ್ಕಾರಕ್ಕೆ ಪಾವತಿಸಬೇಕಾಗಿತ್ತು. ಅದರಲ್ಲಿ ರೂ.1,500/- ಗಳು ಸಹಾಯದನ ಆಗಿದ್ದು, ಉಳಿದ ರೂ.2,500/- ಗಳನ್ನು ಸಾಲದ ರೂಪದಲ್ಲಿ 20 ಕಂತಿನಲ್ಲಿ ಶೇಕಡ 5% ರಂತೆ ಬಡ್ಡಿ ದರದಲ್ಲಿ ತಪ್ಪದೇ ಪ್ರತಿವರ್ಷಕ್ಕೊಮ್ಮೆ ಜಮಾ ಮಾಡಿ ರಶೀದಿಪಡೆಯತಕ್ಕದ್ದು ಎನ್ನುವ ಷರತ್ತು ಪಾಲನೆಯಾಗಿಲ್ಲ, ಆದರೂ ಸಹ ಕರಾರುಪತ್ರದ ಆಧಾರದ ಮೇಲೆ ಖಾತೆ ಬದಲಾವಣೆ ಮಾಡಿ 3ನೇ ಎದುರುದಾರರು ಕರ್ತವ್ಯಲೋಪ ಎಸಗಿ ಕಾನೂನಿಗೆ ವಿರುದ್ಧವಾಗಿ ಖಾತೆ ಬದಲಾವಣೆ ಆಗಿರುವುದನ್ನು ಸರಿಪಡಿಸಬೇಕಾಗಿರುತ್ತದೆ. ಹೀಗಾಗಿ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ದಾಸದಲಿಂಗಪ್ಪ ಎನ್ನುವವ ಹೆಸರಿಗೆ ಆಗಿರುವ ಖಾತೆ ಬದಲಾವಣೆಯನ್ನು ರದ್ದುಪಡಿಸಿ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುವಂತೆ ಎದುರುದಾರರ ಶಿಸ್ತುಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

10. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

4/9/17

(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ